war foot ಮೇಲೆ ಈ ಕೆಲಸವನ್ನು ಮಾಡುತ್ತೇವೆ. ಅದರಲ್ಲಿ ಹಿಂದೇಟು ಹಾಕುವಂತಹ ಪ್ರಶ್ನೆ ಇಲ್ಲ. ಆ Taskforce Committeeಗೆ ಹೆಚ್ಚಿನ ಹಣವನ್ನು ಕೊಡುವಂತಹದ್ದರ ಬಗ್ಗೆ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಇ) **ವಿಷಯ:** ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಾಗೂ ಬಳ್ಳಾರಿ ಜಿಲ್ಲೆಯ ರಮಣದುರ್ಗದಲ್ಲಿ ಬ್ಲಾಕ್ 13ರ ಶೇಕಡ 50ರಷ್ಟು ಪ್ರದೇಶವನ್ನು ಗಣಿಗುತ್ತಿಗೆಗೆ ಕಾಯ್ದಿರಿಸಿದ್ದರೂ ಪರ್ಯಾಯ ಗಣಿಗಾರಿಕೆಗೆ ಆದೇಶಗಳನ್ನು ಕಾರ್ಯಗತಗೊಳಿಸುವಲ್ಲಿ ಆಗಿರುವ ವಿಳಂಬದ ಬಗ್ಗೆ.

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ) : ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಾಗೂ ಬಳ್ಳಾರಿ ಜಿಲ್ಲೆಯ ರಮಣದುರ್ಗದಲ್ಲಿ ಬ್ಲಾಕ್ 13 ರ ಶೇಕಡ 50 ರಷ್ಟು ಪ್ರದೇಶವನ್ನು ಗಣಿ ಗುತ್ತಿಗೆಗೆ ಕಾಯ್ದಿರಿಸಿದ್ದರೂ, ಪರ್ಯಾಯ ಗಣಿಗಾರಿಕೆಗೆ ಆದೇಶಗಳನ್ನು ಕಾರ್ಯಗತಗೊಳಿಸುವಲ್ಲಿ ಆಗಿರುವ ವಿಳಂಬದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಸನ್ಮಾನ್ಯ ಸಭಾಧ್ಯಕ್ಷರೇ, "ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಎ 33 ಎಂಎಂಎಂ 94, ದಿನಾಂಕ: 17.2.2003 ರಲ್ಲಿ ರಾಜ್ಯ ಸರ್ಕಾರ ಹಿಂದೆ ಕೇಂದ್ರ ಸರ್ಕಾರದ ಸ್ವಾಯತ್ತ ಸಂಸ್ಥೆಗಳು ಮೀಸಲಿಟ್ಟಿದ್ದ 11,620.56 ಚದರ ಕಿಲೋ ಮೀಟರ್ ಪ್ರದೇಶವನ್ನು ಸಾರ್ವಜನಿಕರಿಗೆ ಗಣಿಗಾರಿಕೆಗೆ ನೀಡುವ ಸಲುವಾಗಿ de–reserve ಮಾಡಲಾಗಿತ್ತು. ನಂತರ ದಿನಾಂಕ: 15.3.2003ರ ಸರ್ಕಾರದ ಅಧಿಸೂಚನೆಯಲ್ಲಿ de–reserve ಮಾಡಲಾದ ಪ್ರದೇಶಗಳಲ್ಲಿ ಗಣಿ ಗುತ್ತಿಗೆಯನ್ನು ಮಂಜೂರು ಮಾಡುವ ಕುರಿತು ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಈ ರೀತಿ de–reserve ಮಾಡಲಾದ ಪ್ರದೇಶಗಳ ಪೈಕಿ ಬ್ಲಾಕ್ ನಂ. 13/1 ರಲ್ಲಿನ ಶೇಕಡ 50 ರಷ್ಟು ಪ್ರದೇಶವನ್ನು ಮೆಸರ್ಸ್ ಕುದುರೆಮುಖ ಕಬ್ಬಿಣ ಅದಿರು ಕಂಪೆನಿ ನಿಯಮಿತ ಸಂಸ್ಥೆಗೆ ಕಾಯ್ದಿರಿಸಲು 2005ರಲ್ಲಿ ತೀರ್ಮಾನಿಸಲಾಗಿತ್ತು. ಆದರೆ ಈ ಅಧಿಸೂಚನೆ ಕುರಿತಂತೆ ಮಾನ್ಯ

ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಮೊಕದ್ದಮೆಗಳು ಬಾಕಿ ಇದ್ದ ಕಾರಣ ಹಾಗೂ ಮಾನ್ಯ ನ್ಯಾಯಾಲಯದ ತಡೆಯಾಜ್ಞೆ ಜಾರಿಯಲ್ಲಿದ್ದ ಕಾರಣ ಸದರಿ ಸಂಸ್ಥೆಗೆ ಪ್ರದೇಶವನ್ನು ಕಾಯ್ದಿರಿಸುವ ಕುರಿತು ಯಾವುದೇ ಪ್ರಸ್ತಾವನೆಯನ್ನು ಭಾರತ ಸರ್ಕಾರದ ಅನುಮೋದನೆಗೆ ಕಳುಹಿಸಿರುವುದಿಲ್ಲ. ಪ್ರಸ್ತುತ ಈ ಅಧಿಸೂಚನೆ ಕುರಿತಂತೆ ಮಾನ್ಯ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ SLP ಗಳು ಬಾಕಿಯಿರುತ್ತವೆ. ಸದರಿ ಪ್ರದೇಶದ ಗಣಿ ಗುತ್ತಿಗೆ ಮಂಜೂರಾತಿಗಾಗಿ ಒಟ್ಟು 650 ಅರ್ಜಿಗಳು ಸ್ವೀಕೃತವಾಗಿವೆ. ಸದರಿ ಪ್ರದೇಶದ ಗಣಿ ಗುತ್ತಿಗೆಯನ್ನು ಮಂಜೂರು ಮಾಡುವ ಸಮಯದಲ್ಲಿ M/S ಕುದುರೆಮುಖ ಕಬ್ಬಿಣದ ಅದಿರು ಕಂಪೆನಿ ನಿಯಮಿತ ಸಂಸ್ಥೆ ಇವರು ಸಲ್ಲಿಸಿರುವ ಗಣಿ ಗುತ್ತಿಗೆ ಅರ್ಜಿಯನ್ನು ಸಹ ಇದರ ಇತರ ಅರ್ಜಿಗಳೊಂದಿಗೆ ನಿಯಮಾನುಸಾರ ಪರಿಶೀಲಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು. ಕುದುರೆಮುಖ ಕಬ್ಬಿಣದ ಅದಿರು ಕಂಪೆನಿ ನಿಯಮಿತ ಸಂಸ್ಥೆಗೆ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹೊಂಬಳಘಟ್ಟ ಮತ್ತು ಹೊಸಹಳ್ಳಿ ಗ್ರಾಮಗಳಲ್ಲಿ 116.5 ಎಕರೆ ಪ್ರದೇಶದಲ್ಲಿ ಗಣಿ ಗುತ್ತಿಗೆ ಮಂಜೂರು ಮಾಡಲು ಭಾರತ ಸರ್ಕಾರದ ಗಣಿ ಮಂತ್ರಾಲಯ ತನ್ನ ಪೂರ್ವಾನುಮೋದನೆಯನ್ನು ದಿನಾಂಕ: 12.6.2006 ರಲ್ಲಿ ನೀಡಿರುತ್ತದೆ. ಈ ಪ್ರದೇಶದ ಪೈಕಿ ಅರಣ್ಯ ಪ್ರದೇಶವನ್ನು ಒಳಗೊಂಡಿರುವುದರಿಂದ ಅರಣ್ಯ ಪ್ರದೇಶದ ಗಣಿಗಾರಿಕೆ ಮಾಡಲು ಅರಣ್ಯ ಸಂರಕ್ಷಣೆ ಕಾಯ್ದೆ 1980ರ ಸೆಕ್ಷನ್-2 ರ ಪ್ರಕಾರ ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರದ ಮಂತ್ರಾಲಯದಲ್ಲಿ ನಿರಕ್ಷೇಪಣಾ ಅನುಮೋದನೆ ಕಡ್ಡಾಯವಾಗಿದೆ. ಅರಣ್ಯ ಇಲಾಖೆಯ ಅನುಮೋದನೆಯನ್ನು ಪಡೆಯಲು ಕಾರ್ಯ ಪ್ರಗತಿಯಲ್ಲಿದ್ದು ಒಮ್ಮೆ ಅರಣ್ಯ ಇಲಾಖೆಯ ಅನುಮೋದನೆ ಬಂದ ಕೂಡಲೇ ಈ ಸಂಸ್ಥೆಗೆ ಗಣಿ ಗುತ್ತಿಗೆ ಮಂಜೂರು ಮಾಡಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ. ಕುದುರೆಮುಖ ಕಬ್ಬಿಣದ ಅದಿರು ಕಂಪೆನಿ ನಿಯಮಿತ ಸಂಸ್ಥೆ ಭಾರತ ಸರ್ಕಾರದ ಸ್ವಾಯತ್ತ

ಸಂಸ್ಥೆಯಾಗಿದ್ದು ಈ ಸಂಸ್ಥೆ ಗಣಿಗುತ್ತಿಗೆ ಅರ್ಜಿಗಳನ್ನು ಆದ್ಯತೆ ಮೇರೆಗೆ ಪರಿಗಣಿಸಲು ಯಾವುದೇ ವಿಳಂಬ ನೀತಿಯನ್ನು ಅನುಸರಿಸುವುದಿಲ್ಲ."

ಸನ್ಮಾನ್ಯ ಅಧ್ಯಕ್ಷರೇ, Forest clearanceಗೆ ಹೋಗಿದೆ. Revenue, Forest ಇಲಾಖೆಯವರು Joint survey ಮಾಡುತ್ತಿದ್ದಾರೆ. ಈ joint survey ನಲ್ಲಿ village boundary ಬಗ್ಗೆ ಕೆಲವು ಸಮಸ್ಯೆಗಳು ಬಂದಿವೆ. ಇದನ್ನು ಸರಿಪಡಿಸಿ ಕೇಂದ್ರಸರ್ಕಾರಕ್ಕೆ ಇಲಾಖೆಯ ಮೂಲಕ ನಾನು ಕಳುಹಿಸಿಕೊಡುತ್ತೇನೆ. ಆದಷ್ಟುಬೇಗ ಇದು ನಮ್ಮದೇ ಆದಂಥ ಒಂದು ಕುದುರೆಮುಖ ಕಬ್ಬಿಣದ ಅದಿರು ಸಂಸ್ಥೆ ಆಗಿರುವುದರಿಂದ ಈ ಬಗ್ಗೆ ವಿಳಂಬವಾಗದ ರೀತಿಯಲ್ಲಿ ಅರಣ್ಯ ಇಲಾಖೆಗೆ ಸೂಚನೆ ಕೊಟ್ಟು ಆದಷ್ಟುಬೇಗ recommend ಮಾಡಿ ಕಳುಹಿಸಿಕೊಡುತ್ತೇನೆ.

ಶ್ರೀ ಎಂ.ಪಿ. ಕುಮಾರಸ್ವಾಮಿ : ಈಗಾಗಲೇ 2005 ರಲ್ಲಿ ಈ ಒಂದು ಕುದುರೆಮುಖ ಕಂಪೆನಿ ಮುಚ್ಚಿಹೋಗಿತ್ತು. ಈಗ ಅಲ್ಲಿಯ ಉದ್ಯೋಗಿಗಳು ಪರೋಕ್ಷ ಹಾಗೂ ಪ್ರತ್ಯಕ್ಷವಾಗಿ ಹೆಚ್ಚು ಕಡಿಮೆ ಸುಮಾರು 5000 ಜನಸಂಖ್ಯೆಯಾಗುತ್ತಾರೆ. ಹಿಂದಿನ ಸರ್ಕಾರದಲ್ಲಿ ಶ್ರೀ ಧರಂಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಾಗಲೂ ಕೂಡ ನಾವು ಕೇಳಿದ್ದೆವು. ಅಲ್ಲಿಂದ ಇಲ್ಲಿಯವರೆಗೆ ಆ ಉದ್ಯೋಗಿಗಳಿಗೆ ಯಾವುದೇ ರೀತಿಯ ಪರ್ಯಾಯ ವ್ಯವಸ್ಥೆ ಆಗಲಿಲ್ಲ. ಈಗ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹೊಂಬಳಘಟ್ಟ ಮತ್ತು ಹೊಸಹಳ್ಳಿ ಪ್ರದೇಶದಲ್ಲಿ 116 ಹೆಕ್ಟೇರ್ ಕೇಳಿದ್ದಾರೆ. ಅಲ್ಲಿ ತಮಗೆ ತಿಳಿದ ಮಟ್ಟಿಗೆ ಈ ಅಧಿಕಾರಿಗಳು ಒಂದು ಗಡಿಯನ್ನು ಗುರುತು ಮಾಡಬೇಕಾದರೆ ಬರಡು ಭೂಮಿಯನ್ನು ಕೊಡುವಂಥದ್ದನ್ನು ಮಾಡುತ್ತಾರೆಂಬುದು ನಮ್ಮ ಗಮನಕ್ಕೆ ಬಂದಿದೆ. ಇದರಿಂದ ನಮ್ಮ ಕ್ಷೇತ್ರದಲ್ಲಿ ಕುದುರೆಮುಖ ಕಂಪೆನಿಯ ಸಮಸ್ಯೆಯನ್ನು ಖಂಡಿತವಾಗಿ ಬಗೆಹರಿಸುತ್ತೇವೆ. ನಮ್ಮ ಸರ್ಕಾರ ಬರುತ್ತದೆ, ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗುತ್ತಾರೆ, ಖಂಡಿತ ಅವರು ಬಗೆಹರಿಸುತ್ತಾರೆಂದು ಆಶ್ವಾಸನೆ ಕೊಟ್ಟು ಎರಡು ಬಾರಿ ಗೆದ್ದು ಬಂದಿದ್ದೇನೆ. ಹಾಗಾಗಿ ಇದರ ಬಗ್ಗೆ ಹೊಸ

ಬೌಂಡರಿ ಮಾಡಬಾರದು, ಹಳೆ ಬೌಂಡರಿಯಲ್ಲಿ ಕೊಡುವುದಕ್ಕೆ ದಯಮಾಡಿ ತಾವು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಕುದುರೆಮುಖ ಕಬ್ಬಿಣ ಅದಿರು ಕಂಪೆನಿ ಭಾರತ ಸರ್ಕಾರದ ಸ್ವಾಯತ್ತ ಸಂಸ್ಥೆಯಾಗಿರುವುದರಿಂದ ಇವರಿಗೆ ನಾವು ಕಬ್ಬಿಣದ ಅದಿರನ್ನು ಸಾಗಾಣಿಕೆ ಮಾಡಲು ಅವಕಾಶವನ್ನು ಕೊಡಲೇಬೇಕು. ಫಾರೆಸ್ಟ್‌ನವರಿಗೂ ನಾವು ಹೇಳಿದ್ದೇವೆ. ಆದಷ್ಟುಬೇಗ ಆ ಬೌಂಡರಿ ಸಮಸ್ಯೆಯನ್ನು ಕ್ಲಿಯರ್ ಮಾಡಲಿಕ್ಕೆ ಹೇಳಿದ್ದೇವೆ, ಅವರು ಬಂದು ನನ್ನನ್ನು ಭೇಟಿ ಮಾಡಿದ್ದರು. ಆದಷ್ಟುಬೇಗ ಇದನ್ನು ಕ್ಲಿಯರ್ ಮಾಡಿ ಅರಣ್ಯ ಇಲಾಖೆಯ ಮೂಲಕವೇ ತಕ್ಷಣ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಇದಕ್ಕೆ ಏನು ಸಹಾಯ ಬೇಕೋ ಅದನ್ನು ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ. ನಾನು ಮಾಡಿಸಿಕೊಡುತ್ತೇನೆ. ಆ ದಿಕ್ಕಿನಲ್ಲಿ ಪ್ರಯತ್ನ ನಡೆದಿದೆ.

ಈ) ವಿಷಯ: ಚಿಕ್ಕಬಳ್ಳಾಪುರ ಜಿಲ್ಲೆ ಮುದ್ದೇನಹಳ್ಳಿಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ವಿಶ್ವವಿಖ್ಯಾತ ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ವೆಂದು ಹೆಸರಿಟ್ಟು ಶಿಲಾನ್ಯಾಸ ಮಾಡುವ ಬಗ್ಗೆ.

ಶ್ರೀ ಎನ್. ಸಂಪಂಗಿ : ಚಿಕ್ಕಬಳ್ಳಾಪುರ ಜಿಲ್ಲೆ ಮುದ್ದೇನಹಳ್ಳಿಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ವಿಶ್ವವಿಖ್ಯಾತ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವೆಂದು ಹೆಸರಿಟ್ಟು ಶಿಲಾನ್ಯಾಸ ಮಾಡುವ ಬಗ್ಗೆ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಸರ್ಕಾರವು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಚಿಕ್ಕಬಳ್ಳಾಪುರ ಜಿಲ್ಲೆಯ ಸರ್. ಎಂ.ವಿಶ್ವೇಶ್ವರಯ್ಯನವರ ಜನ್ಮಸ್ಥಳವಾದಂಥ ಮುದ್ದೇನಹಳ್ಳಿಯಲ್ಲಿ 200 ಎಕರೆ ವಿಸ್ತೀರ್ಣದಲ್ಲಿ ಒಂದು ತಾಂತ್ರಿಕ ಸಂಸ್ಥೆಯನ್ನು ಸ್ಥಾಪಿಸಿದ್ದು ಆ ಸಂಸ್ಥೆಗೆ ಸರ್.ಎಂ.ವಿಶ್ವೇಶ್ವರಯ್ಯನವರ ಗೌರವಾರ್ಥ Vishweshwaraiah Institute of Advanced Technology